SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand | Rtn. K. Sooryanarayana Udpa | Rtn. N.G. Usha | Rtn. M. Madhavachar |
|---|---|---|---|
| District Governor 2024-25 | President, Mob: 99009 66114 | Secretary, Mob : 81975 92278 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –38 ದಿನಾಂಕ : 17–03–2025




**ದಿನಾಂಕ: 17.03.2025 ರಂದು ತಳಿರು ತೋರಣ, ಹಸಿರೆಲೆಯ ವಾತಾವರಣದಲ್ಲಿ ಕಂಗೊಳಿಸುತ್ತಿದ್ದ ರೋಟರಿ ಯುವಕೇಂದ್ರದ ಸಭಾಂಗಣದಲ್ಲಿ ಸಂಜೆ 7.15 ಕ್ಕೆ ನಮ್ಮ ಕ್ಲಬ್‌ಗೆ ಗವರ್ನರ್‌ರವರ ಅಧಿಕೃತ ಭೇಟಿಯ ಸಾರ್ವಜನಿಕ ಕಾರ್ಯಕ್ರಮಕ್ಕೆ ಫಸ್ಟ್ ಲೇಡಿ ಆಫ್ ದಿ ಡಿಸ್ಟ್ರಿಕ್ಟ್ ಶ್ರೀಮತಿ ರೇಖಾ ದೇವ್ ಆನಂದರೊಂದಿಗೆ ರೋಟರಿ ಜಿಲ್ಲಾ ಗವರ್ನರ್ ರೊ.ಎಂಪಿಹೆಚ್‌ಎಫ್. ಸಿ.ಎ. ದೇವ್ ಆನಂದರವರನ್ನು ನಮ್ಮ ಕ್ಲಬ್‌ನ ಮಹಿಳಾ ಸದಸ್ಯರು ಮತ್ತು ಅನ್ಸ್‌ರವರು ಪೂರ್ಣ ಕುಂಭದೊಂದಿಗೆ, ದೀಪ ಬೆಳಗಿಸಿ, ವಿಶಿಷ್ಟವಾಗಿ ರೊ.ರಮಾ ಗೋಪಾಲ್‌ರವರು ಎಲ್ಲರೊಂದಿಗೆ ಆರತಿ ಎತ್ತಿ ಮತ್ತು ಅವರ ಸಾಂಪ್ರದಾಯಿಕವಾದ ಹಾಡಿನೊಂದಿಗೆ ಗೌರವಯುತವಾಗಿ ಸ್ವಾಗತಿಸಲಾಯಿತು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಆಂಗ್ಲ ಹಾಡಿನ ಮೂಲಕ ಸರ್ವರನ್ನು ಸಭಾಂಗಣಕ್ಕೆ ಸ್ವಾಗತಿಸಿದರು.**

ರೊ.ಎಂಪಿಹೆಚ್‌ಎಫ್.ಸಿ.ಎ. ದೇವ್ ಅನಂದರವರು ನಮ್ಮ ರೋಟರಿ ಯುವಕೇಂದ್ರದ ಸಭಾಂಗಣದ ಫಲಕ ಹಾಗೂ ಮಹಾದಾನಿಗಳ ಫಲಕಗಳನ್ನು ಅನಾವರಣಗೊಳಿಸಿದರು.

ವೇದಿಕೆಯಲ್ಲಿ ರೋಟರಿ ಜಿಲ್ಲೆ 3182 ರ ಗವರ್ನರ್ ರೊ.ರೊ. ಎಂಪಿಹೆಚ್ ಎಫ್.ಸಿ.ಎ. ದೇವ್ ಅನಂದರವರು, ಜೋನ್ 10 ರ ಸಹಾಯಕ ಗವರ್ನರ್ ರೊ.ಎಸ್. ಆರ್. ನಾಗರಾಜ್, ಜೋನಲ್ ಲೆಫ್ಟಿನೆಂಟ್ ರೊ. ಹೆಚ್.ವಿ. ಆದರ್ಶರವರು, ಕ್ಲಬ್‌ನ ಅಧ್ಯಕ್ಷರಾದ ರೊ.ಕೆ.ಸೂರ್ಯ ನಾರಾಯಣ ಉಡುಪರು, ಕಾರ್ಯದರ್ಶಿ ರೊ.ಎನ್.ಜಿ.ಉಷಾರವರು ಉಪಸ್ಥಿತರಿದ್ದು, ನೂತನವಾಗಿ ವಿಶೇಷವಾಗಿ ಸಿಂಗಾರಗೊಂಡ ವೇದಿಕೆಯಲ್ಲಿ ಎಲ್ಲಾ ಕಾರ್ಯಕ್ರಮಗಳು ಸುಲಲಿತವಾಗಿ ನಡೆದು ಯಶಸ್ವಿಯಾಗಿ ಸಂಪನ್ನಗೊಂಡಿತು. ಅಂದಿನ ಕಾರ್ಯಕ್ರಮದ ನಿರೂಪಣೆಯನ್ನು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ನೆರವೇರಿಸಿಕೊಟ್ಟರು. ಸಭಾಂಗಣ ಹಾಗೂ ಸುತ್ತಲ ತಳಿರು ತೋರಣಕ್ಕೆ ರೊ.ಶೈಲಿನ್, ರೊ.ಕೆ.ಸಿ. ದಶರಥ್, ರೊ. ಸಿ. ವಿಜಯಕುಮಾರ್ ಮತ್ತು ರೊ. ಎಸ್. ಮಂಜುನಾಥ್‌ರವರು, ರೊ. ಚಂದ್ರಶೇಕರ್‌ರವರು ಸಹಕರಿಸಿ ರೋಟರಿ ಯುವಕೇಂದ್ರವನ್ನು ಚಂದಗಾಣುವಂತೆ ಮಾಡಿದ್ದರು.

ಸಾರ್ಜೆಂಟ್ ಅಟ್ ಆರ್ಮ್ಸ್ ರೊ.ಶೈಲಿನ್‌ರವರು, ರೊ.ಎಂ. ಪಿಹೆಚ್‌ಎಫ್. ಸಿ.ಎ. ದೇವ್ ಅನಂದ ಮತ್ತು ಕ್ಲಬ್‌ನ ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರವರಿಗೆ ಕಾಲರ್ ತೊಡಿಸುವ ಮೂಲಕ ಸಭೆ ನಡೆಸಲು ಅನುವು ಮಾಡಿದರು. ರೊ. ರೇಣುಕಾ ಶ್ರೀನಾಥರವರು "ಬೋ ಶಂಭೋ ಶಿವಶಂಭೋ ಸ್ವಯಂಭೂ" ಗೀತೆಯ ಸುಶ್ರಾವ್ಯ ಗಾಯನದ ಮೂಲಕ ಪ್ರಾರ್ಥನೆಯನ್ನು ಮಾಡಿದರು. ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಕ್ಲಬ್‌ನ ಇತಿಹಾಸದ ಬಗ್ಗೆ ಕೆಲವು ವಿಷಯಗಳನ್ನು ತಿಳಿಸುತ್ತಾ ಸರ್ವರನ್ನು ಸಭೆಗೆ ಸ್ವಾಗತಿಸಿದರು. ರೊ. ಕಿಶೋರ್ ಶೀರನಾಳಿಯವರು ಜಿಲ್ಲಾ ಗವರ್ನರ್ ರೊ.ಎಂಪಿಹೆಚ್‌ಎಫ್.ಸಿ.ಎ. ದೇವ್ ಅನಂದರವರ ಪರಿಚಯ ಮಾಡಿದರು. ಕಾರ್ಯಕ್ರಮವು ದೀಪ ಪ್ರಜ್ವಲನದ ಮೂಲಕ ವಿದ್ಯುಕ್ತವಾಗಿ ಆರಂಭಗೊಂಡಿತು. ರೊ. ವೈ.ವಿ. ವೆಂಕಟರಮಣ ಜೋಯ್ಸ್‌ರವರು ಹುಟ್ಟುಹಬ್ಬದ ಶುಭಾಶಯಗಳು ಮತ್ತು ವಿವಾಹ ವಾರ್ಷಿಕೋತ್ಸವದ ಶುಭಾಶಯಗಳನ್ನು ಕೋರಿದರು. ರೊ. ವೈ.ಜಿ.ಗುಪ್ತ, ರೊ.ಎ.ಮಂಜುನಾಥ್, ರೊ.ಡಿ.ಎಲ್. ಮಂಜುನಾಥ್ & ಶ್ರೀಮತಿ ಶ್ರೀಲತಾ, ಶ್ರೀಮತಿ ರಂಜಿನಿ ದತ್ತಾತ್ರಿ, ರೊ.ಡಾ. ಆರ್.ಡಿ.ಪ್ರಭು ಮತ್ತು ರೊ. ಡಾ. ಉಷಾ ಪ್ರಭು ಮತ್ತು ರೊ.ಬಿ.ಎನ್. ವಿಶ್ವೇಂದ್ರರವರುಗಳು ವೇದಿಕೆಗೆ ಆಗಮಿಸಿ ಗವರ್ನರ್‌ರವರಿಂದ ಮಾಲೆ ಮತ್ತು ನೆನಪಿನ ಕಾಣಿಕೆ ಸ್ವೀಕರಿಸಿದರು.ಈ ಸಂದರ್ಭದಲ್ಲಿ ರೊ.ಕಿಶೋರ್ ಶೀರನಾಳಿ ಮತ್ತು ರೊ.ರಮಾ ಗೋಪಾಲ್, ರೊ. ವೈ.ವಿ. ಜೋಯ್ಸ್‌ರವರು "ಮದುವೆಯ ಈ ಬಂಧ ಅನುರಾಗದ ಅನುಬಂಧ" ಹಾಡನ್ನು ಗಾಯನ ಮಾಡಿದರು.

ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಈ ಸಾಲಿನಲ್ಲಿ ಆಗಿರುವ ಕಾರ್ಯಕ್ರಮಗಳ ವಿವರಗಳನ್ನು ವೀಡಿಯೋ ಪ್ರಾತ್ಯಕ್ಷಿಕೆ ಮೂಲಕ ಸಭೆಯಲ್ಲಿ ವಿವರಿಸಿದರು. ಇದಕ್ಕೆ ರೊ. ಹೆಚ್.ಎಸ್. ಮೋಹನ್‌ರವರು ಸಹಕರಿಸಿದ್ದರು.

ಅಂದು ನೂತನ ಸದಸ್ಯರಾಗಿ ಈ ಕೆಳಕಂಡವರು ನಮ್ಮ ರೋಟರಿ ಬಳಗಕ್ಕೆ ಸೇರ್ಪಡೆಯಾದರು. ಅವರುಗಳನ್ನು ರೊ.ವೀರಣ್ಣ ಎ. ಹುಗ್ಗಿಯವರು ಪರಿಚಯಿಸಿದರು. Sri. K. Manjunath and Smt. Naveena Manjorie Pais ರೋಟರಿಗೆ ಸದಸ್ಯರಾಗಿ ಸೇರ್ಪಡೆಯಾದರು.

ನಮ್ಮ ಕ್ಲಬ್‌ನ ವತಿಯಿಂದ ಮೇಲಿನ ಹನಸವಾಡಿ ಪ್ರಾಥಮಿಕ ಶಾಲೆಗೆ ಬುಕ್ ರ್ಯಾಕ್ ನೀಡುವ ಬಗ್ಗೆ ತಿಳಿಸಲಾಗಿ ಅಲ್ಲಿನ ಮುಖ್ಯಸ್ಥರಾದ ಶ್ರೀಮತಿ ವತ್ಸಲರವರಿಗೆ ಸಾಂಕೇತಿಕವಾಗಿ ಪತ್ರದ ಮೂಲಕನೀಡಲಾಯಿತು. ಬುಕ್ ರ್ಯಾಕ್‌ನ್ನು ರೊ. ಟಿ.ಕೆ.ಎಂ. ಭಟ್ ಮತ್ತು ರೊ.ಕಿಶೋರ್ ಶೀರನಾಳಿಯವರು ದೇಣಿಗೆಯಾಗಿ ನೀಡಿದ್ದರು. ಶಿವಮೊಗ್ಗ ನಗರದ ಬಯೋ ಡೈವರ್ಸಿಟಿ ಪಾರ್ಕಗೆ ನಮ್ಮ ಕ್ಲಬ್‌ನ ವತಿಯಿಂದ ರೂ.10000.00 ದೇಣಿಗೆಯನ್ನು ಅದರ ಮುಖ್ಯಸ್ಥರಾದ ಮಾಜಿ ಸಹಾಯಕ ಗವರ್ನರ್ ರೊ.ಆನಂದ ಮೂರ್ತಿಯವರಿಗೆ ನೀಡಲಾಯಿತು.

ಮನಸ್ಫೂರ್ತಿ ಕಲಿಕಾ ಕೇಂದ್ರ ಇಲ್ಲಿನ ಬಡ ಮಹಿಳೆಯರಿಗೆ ಉಚಿತವಾಗಿ ಬಟ್ಟೆ ಹೊಲಿಯುವ ಯಂತ್ರಗಳನ್ನು ನೀಡಲಾಯಿತು. ಶ್ರೀಮತಿ ಜ್ಯೋತಿ ಮತ್ತು ಶ್ರೀಮತಿ ರಂಗನಾಯಕಿ ಅವುಗಳನ್ನು ಪಡೆದರು. ಇದರ ಬಗ್ಗೆ ಮಹಿಳಾ ಸಬಲೀಕರಣದ ಚೇರ್ಮನ್ ಮತ್ತು ಮಾಜಿ ಸಹಾಯಕ ಗವರ್ನರ್ ರೊ.ಸುನೀತಾ ಶ್ರೀಧರ್‌ರವರು ಈ ಕಾರ್ಯಕ್ರಮ ನಡೆಸಿಕೊಟ್ಟರು. ಹೊಲಿಗೆ ಯಂತ್ರಗಳನ್ನು ರೊ. ಮಲ್ಲಿಕಾ ವಿ.ಜೋಯ್ಸ್ ಮತ್ತು ರೊ. ರಮಾಗೋಪಾಲ್‌ರವರು ಕೊಡಮಾಡಿದ್ದರು.









































ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ





























ರೋಟರಿಯ ಉದ್ದೇಶ ನಮ್ಮ – ನಿಮ್ಮೆಲ್ಲರ ಸಂಬಂಧಗಳ ಬೆಸುಗೆ

ರೊ. ಪಿಡಿಜಿ. ಡಾ.ಪಿ.ನಾರಾಯಣರವರು – ನಮ್ಮ ಕ್ಲಬ್‌ನಿಂದ ಮೇಜರ್ ಡೋನರ್‌ಗಳಾಗಿ ರೋಟರಿ ಫೌಂಡೇಷನ್‌ಗೆ 17000 ಡಾಲರ್ ದೇಣಿಗೆ ನೀಡಿದ ಶ್ರೀ ನವನೀತ್‌ರವರಿಗೆ ಕೃತಜ್ಞತೆ ತಿಳಿಸಿದರು. ಅವರ ಪರವಾಗಿ ಆಗಮಿಸಿದ ಅವರ ತಾಯಿ ಶ್ರೀಮತಿ ನಾಗರತ್ನ ಮುಖ್ಯಸ್ಥರು ವಿದ್ಯಾಭಾರತಿ ಶಾಲೆ ಇವರನ್ನು ಸಭೆಗೆ ಪರಿಚಯಿಸಿದರು. ಅಲ್ಲದೇ ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್.ಜಿ.ಉಷಾರವರು ಪಿಹೆಚ್‌ಎಫ್‌ದೇಣಿಗೆ ನೀಡಿದ್ದಕ್ಕಾಗಿ ಅಂತರರಾಷ್ಟ್ರೀಯ ರೋಟರಿಯಿಂದ ಬಂದ ಪಿಹೆಚ್‌ಎಫ್ ಸರ್ಟಿಫಿಕೇಟ್ ಮತ್ತು ಪಿನ್‌ಗಳನ್ನು ನೀಡಿದರು.

**Solute to Silent Workers:** ಈ ಕಾರ್ಯಕ್ರಮವನ್ನು ಮಾಜಿ ಸಹಾಯಕ ಗವರ್ನರ್ ರೊ. ಸುನೀತಾ ಶ್ರೀಧರ್‌ರವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು ಮತ್ತು ಸನ್ಮಾನಿತರ ಪರಿಚಯವನ್ನು ಮಾಡಿಕೊಟ್ಟರು. ಈ ಕೆಳಕಂಡವರು ಸನ್ಮಾನಿಸಲ್ಪಟ್ಟರು.

1. **ಶ್ರೀಮತಿ ಗೀತಾ ಪಂಡಿತ್** – ಹಲವಾರು ಮಹಿಳಾ ಮಂಡಳಿಗಳಲ್ಲಿದ್ದಾರೆ. ಸುಮಾರು 3500 ಬಟ್ಟೆ ಕೈ ಚೀಲಗಳನ್ನು ಹೊಲಿದು ಹಂಚಿ ಪ್ರಧಾನ ಮಂತ್ರಿಗಳಿಂದ ಮೆಚ್ಚುಗೆ ಪಡೆದಿದ್ದಾರೆ.
2. **ಶ್ರೀ ಗಿರೀಶ್ ಕೆ.ಆರ್.** – ಗಣೇಶ್ ಎಂಟರ್ ಪ್ರೈಸಸ್‌ನ ಲೆಕ್ಕಾಧಿಕಾರಿ, ಬಿಡುವಿನ ವೇಳೆಯಲ್ಲಿ ಹಿರಿಯ ನಾಗರಿಕರಿಗೆ ಕ್ಯಾಟರಿಂಗ್ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.
3. **ಶ್ರೀಮತಿ ಹರಿಣಿ** – ಕುವೆಂಪು ಮಂದಿರದ ವೇದಿಕೆ ಸಹಾಯಕರು.
4. **ಶ್ರೀಮತಿ ಶಿವಮ್ಮ** – ಕುವೆಂಪು ರಂಗಮಂದಿರದ ಕೈತೋಟದ ಸಹಾಯಕರು.

ಇವರುಗಳನ್ನು ಗವರ್ನರ್ ರೊ.ಎಂಪಿಹೆಚ್‌ಎಫ್.ಸಿ.ಎ. ದೇವ್ ಅನಂದರವರು ಸನ್ಮಾನಿಸಿದರು.

ರೊ.ಡಿ.ಎಲ್. ಮಂಜುನಾಥ್, ಚೇರ್ಮನ್ ರೋಟರಿ ಫೌಂಡೇಷನ್ ಇವರು ಮಾತನಾಡುತ್ತಾ ಎಷ್ಟು ಜನ ದೇಣಿಗೆ ಕೊಟ್ಟಿದ್ದಾರೆ ಎನ್ನುವುದಕ್ಕಿಂತ ಪ್ರತಿಯೊಬ್ಬ ಸದಸ್ಯರೂ ಸಹ ದೇಣಿಗೆ ನೀಡುವಲ್ಲಿ ಸಹಕರಿಸಬೇಕು ಎಂದು ತಿಳಿಸಿ ಈ ಬಾರಿ ದೇಣಿಗೆ ನೀಡಿದವರ ರೋಟರಿ ಸ್ನೇಹಿತರುಗಳನ್ನು ವೇದಿಕೆಗೆ ಆಹ್ವಾನಿಸಿ, ಗವರ್ನರ್‌ರವರಿಂದ ಗುರುತಿಸಲ್ಪಟ್ಟರು.ವಿವರ ಈ ರೀತಿ ಇದೆ. Rtn. Mallika V. Jois, Rtn. D.L. Manjunath, Rtn. N.V.Bhat, Rtn. Bhargavi Bhat, Rtn. Venkataramana G Hegde, Rtn. Krishna Murthy, Rtn. Kishore Sheernaly, Rtn. Anuradha Sheernaly, Rtn. Pete Ajaykumar, Rtn. A Manjunath, Rtn. Suneetha Sridhar , Rtn. S. Manjunath, Rtn. Gopalakrishna Guptha, Rtn. Sharada Gopal, Rtn. Vasantha U. Sastry, Rtn. Dr. Usha R. Prabhu, Rtn. Anitha Senthilvelan, Rtn. Hemvavathi Manjunath, Rtn. Rama Gopal, Rtn. S.G.Gopal, Rtn. Y.V.Venkataramana Jois

ಈ ಕೆಳಕಂಡ ನಮ್ಮ ಸದಸ್ಯರು ರೋಟರಿ ಫೌಂಡೇಷನ್‌ಗೆ ದೇಣಿಗೆ ನೀಡಲು ವಾಗ್ದಾನ ನೀಡಿದ್ದಾರೆ. Rtn. Veeranna A. Huggi, Rtn. T.K.M. Bhat, Rtn. Vaneetha Sandeep

ಈ ವಾರದ ವಿಶೇಷ ಸಂಚಿಕೆ "ವಿಶ್ವಮಿತ್ರ" ವನ್ನು ಸಹಾಯಕ ಗವರ್ನರ್ ರೊ.ಎಸ್. ಆರ್.ನಾಗರಾಜ್‌ರವರು ಬಿಡುಗಡೆಗೊಳಿಸಿದರು. ಅವರು ಮಾತನಾಡುತ್ತಾ ಇಂದು ನನಗೆ ಸುದಿನ. ಏಕೆಂದರೆ ಈ ಕ್ಲಬ್ ಪ್ರಾರಂಭವಾದಾಗ ನಾನಿನ್ನು ಹುಟ್ಟಿರಲಿಲ್ಲ. ಅಂಥಹ ಕ್ಲಬ್‌ಗೆ ಅತಿಥಿಯಾಗಿ ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು. ಧೈರ್ಯದಿಂದ, ಆತ್ಮಸ್ಥೈರ್ಯದಿಂದ, ವಿವೇಚನೆಯಿಂದ, ಸಹನೆಯಿಂದ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಕಾರ್ಯ ನಿರ್ವಹಿಸುತ್ತಿರುವ ರೊ. ಕೆ.ಸೂರ್ಯನಾರಾಯಣ ತಂಡದವರಿಗೆ ತಮ್ಮ ಅಭಿನಂದನೆಗಳನ್ನು ತಿಳಿಸಿದರು. ರೋಟರಿಗೆ ಸಂಬಂಧಪಟ್ಟಂತೆ ಎಲ್ಲಾ ಕೆಲಸಗಳನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ನಮಗೆ ಎಲ್ಲ ವಿಧದಲ್ಲೂ ಸಹರಿಸಿದ್ದಾರೆ ಅವರಿಗೆ ವಂದನೆಗಳು ಎಂದರು.

ಅಂದಿನ ಪ್ರಮುಖ ಆಕರ್ಷಣೆ ಮತ್ತು ನಮ್ಮ ರೋಟರಿ ಜಿಲ್ಲೆ 3182ರ ಗವರ್ನರ್ ರೊ.ಎಂಪಿಹೆಚ್‌ಎಫ್.ಸಿ.ಎ. ದೇವ್ ಅನಂದರವರು ಮಾತನಾಡಿದರು. ಅವರು ಮಾತನಾಡುತ್ತಾ ಇದು ನಮ್ಮ 80 ನೇ ಅಧಿಕೃತ ಭೇಟಿ ಕಾರ್ಯಕ್ರಮ. ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರವರು ತಮ್ಮ ಕೆಲಸದಲ್ಲಿ ಅಚ್ಚುಕಟ್ಟುತನ ತೋರಿ ಅದರಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. **ನಮ್ಮ ಡೈರೆಕ್ಟರಿಯಲ್ಲಿ ಸೂರ್ಯನಾರಾಯಣ ಉಡ್ಪ ಎಂಬುದಾಗಿ ಇದ್ದು 'ಯು' ಅಕ್ಷರ ಎಲ್ಲಿದೆ ನೋಡಿದರೆ ಇವರ ಜೊತೆಗಿದ್ದಾರೆ 'ಉಷಾ'ರವರು** ಎಂದು ಹಾಸ್ಯ ಚಟಾಕಿಯೊಂದನ್ನು ಹಾರಿಸಿದರು. ಒಳ್ಳೇ ಜೋಡಿ ಚೆನ್ನಾಗಿ ಕ್ಲಬ್‌ನ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ರೋಟರಿ ಜಿಲ್ಲೆಯ ಮೊದಲು ಮಹಿಳಾ ಅಧ್ಯಕ್ಷೆ ರೊ.ಡಾ. ಉಷಾ ಪ್ರಭುರವರನ್ನು ವೇದಿಕೆಗೆ ಆಹ್ವಾನಿಸಿದರು. ಶ್ರೀಮತಿ ರೇಖಾ ದೇವ್ ಆನಂದ್ ಮತ್ತು ಗವರ್ನರ್ ದೇವ್ ಆನಂದ್‌ರವರು ಅವರಿಗೆ ಸನ್ಮಾನಿಸಿ, ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು.

ಈ ಕ್ಲಬ್ ವಿಶೇಷವಾದ ಪತ್ರಿಷ್ಠಿತವಾದ ರಾಯಲ್ ಕ್ಲಬ್ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇಡೀ ಜಿಲ್ಲೆಯಲ್ಲಿ ಇದು 2ನೇ ಕ್ಲಬ್ ಆಗಿದ್ದು, ಹಿಸ್ ಹೈನೆಸ್ ಜಯಚಾಮರಾಜೇಂದ್ರ ಒಡೆಯರ್‌ರವರಿಂದ ಉದ್ಘಾಟನೆಯಾಗಿರುವಂಥಹದು ವಿಶೇಷ ಎಂದರು. ಸಂಸ್ಥಾಪಕ ಅಧ್ಯಕ್ಷರು ಡಿ.ಸಿ. ಆಗಿದ್ದರು ಹಾಗೂ ಕಾರ್ಯದರ್ಶಿಯವರು ಹೈಕೋರ್ಟ್ ಜಡ್ಜ್ ಆಗಿದ್ದರು. ಆದುದರಿಂದ ಇದು ಹೈ ಕ್ವಾಲಿಟಿ ಕ್ಲಬ್ ಎಂದರು. ಪ್ರತಿಷ್ಠಿತವಾದ ಈ ಕ್ಲಬ್ ಅಂದಿನಿಂದ ಇಂದಿನವರೆಗೂ ಆರೋಗ್ಯ ಪೂರ್ಣ ಮತ್ತು ಸಂತಸ ಭರಿತವಾದ ಸಮಾಜದ ನಿರ್ಮಾಣವಾಗಬೇಕು ಎಂದು ಶ್ರಮಿಸುತ್ತಿದೆ ಎಂದರು. ಇಲ್ಲಿ ನೂರಾರು ಕ್ಲಾಸಿಫಿಕೇಶನ್‌ಗಳಿದ್ದು ಇನ್ನೂ ನಾಲ್ಕು ಜನರು ಕ್ಲಬ್ ಸೇರುವ ಸಂಭವವಿದೆ. ನಾಲ್ಕು ಜಿಲ್ಲಾ ಗವರ್ನರ್‌ಗಳನ್ನು ಕೊಟ್ಟಂತಹ ಈ ಕ್ಲಬ್. ಪ್ರಜ್ಞಾವಂತರು, ಮೇಧಾವಿಗಳು, ದಾನಿಗಳು ಮತ್ತು ಮಾತುಗಾರರು ಇರುವಂತಹ ಈ ಕ್ಲಬ್‌ನಲ್ಲಿನ ಕಾರ್ಯಕ್ರಮಕ್ಕೆ ಭಾಗವಹಿಸಿದ್ದಕ್ಕೆ ನನಗೆ ಹೆಮ್ಮೆಯಿದೆ ಎಂದರು.

ಪೂರ್ಣ ಕುಂಭ ಸ್ವಾಗತದಿಂದ ಆರತಿ ಎತ್ತಿ ಸಾಂಪ್ರಾದಾಯಿಕವಾಗಿ ಆಧುನಿಕ ಹಾಗೂ ಸಾಂಪ್ರದಾಯಿಕ ಹಾಡಿನಿಂದ ಸ್ವಾಗತಿಸಿದ್ದೀರಿ ಧನ್ಯವಾದಗಳು. ಇಂದು ಬೆಳಗಿನಿಂದ ರೋಟರಿ ಯುವಕೇಂದ್ರ, ಉಷಾ ನರ್ಸಿಂಗ್ ಹೋಂ., ಆಶಾಕಿರಣ ಶಾಲೆ ಮತ್ತು ಶರಣ್ಯದಂತಹ ಸಂಸ್ಥೆಗಳಿಗೆ ಭೇಟಿ. ರಸ್ತೆ ಸುರಕ್ಷಾ ತಿಳುವಳಿಕಾ ಫಲಕ ಅನಾವರಣ. ಇವೆಲ್ಲಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇನೆ. ಶರಣ್ಯದಂತಹ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಬೇಕೆಂಬ ಅವರ ಹಂಬಲಕ್ಕೆ ನೀರೆರೆಯಿರಿ. ಶರಣ್ಯದಲ್ಲಿ ಮ್ಯಾಜಿಕ್ ಆಫ್ ರೋಟರಿ ಆಗಿರುವುದು. ರಾಯರ ಪವಾಡ ಆಗಿರುವುದರ ಬಗ್ಗೆ ಉಲ್ಲೇಖಿಸಿದರು. ಅಲ್ಲಿಗೆ ಇನ್ನೂ ಒಂದು ಕೋಟಿ ರೂಗಳ ಸವಲತ್ತು ಬೇಕಾಗಿದ್ದು ಅದನ್ನು ಮುಂದುವರೆಸಿಕೊಂಡು ಹೋಗಿರಿ ಎಂದರು. ಇದು ಒಂದು ಸಿಗ್ನೇಚರ್ ಪ್ರಾಜೆಕ್ಟ್ ಆಗಿರುತ್ತದೆ. ಅದಕ್ಕೆ ತಮ್ಮೆಲ್ಲರ ಬೆಂಬಲವಿರಲಿ ಎಂದರು.

ಮುಂದಿನ ಅಧ್ಯಕ್ಷರು ನೀಡಿರುವ ಥೀಮ್ UNITE FOR GOOD ಎಂಬುದಾಗಿದ್ದು ಅದಕ್ಕೆ ತಮ್ಮ ಸಹಕಾರವಿರಲಿ ಎಂದರಲ್ಲದೇ ಹೊಸ ಸದಸ್ಯರನ್ನು ರೋಟರಿ ಸೇರ್ಪಡೆಗೊಳಿಸಿರಿ. ಅದರಲ್ಲಿ ಶೇ 25% ಮಹಿಳಾ ಸದಸ್ಯರನ್ನು ಸೇರಿಸಿ ಎಂದರು. ಮಹಿಳಾ ಸಬಲೀಕರಣಕ್ಕಾಗಿ ಹೊಲಿಗೆ ಯಂತ್ರವನ್ನು ನೀಡಿದ್ದೀರಿ. ರೋಟರಿ ಜೈವಿಕ ಅರಣ್ಯ ಯೋಜನೆಗೆ ದೇಣಿಗೆಯನ್ನು ನೀಡಿದ್ದೀರಿ. ಸೈಲೆಂಟ್ ವರ್ಕರ್‌ಗಳಿಗೆ ಸನ್ಮಾನ ಮಾಡಿದ್ದೀರಿ. ನಮ್ಮ ರೋಟರಿ ಸಮ್ಮೇಳನದಲ್ಲಿ ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು ಎಂದರು.

ರೊ.ಪಿಡಿಜಿ. ಡಾ.ಆರ್.ಡಿ.ಪ್ರಭು ಮತ್ತು ರೊ.ಪಿಡಿಜಿ. ಡಾ.ಪಿ. ನಾರಾಯಣರವರು ಮತ್ತು ವೇದಿಕೆಯಲ್ಲಿರುವವರೆಲ್ಲಾ ಸೇರಿ ರೋಟರಿ ಜಿಲ್ಲಾ ಗವರ್ನರ್‌ರವರನ್ನು ಮತ್ತು ಶ್ರೀಮತಿ ರೇಖಾ ಆನಂದರವರನ್ನು ಸನ್ಮಾನಿಸಿದರು. ಹಾಗೆಯೇ ಸಹಾಯಕ ಗವರ್ನರ್ ರೊ.ಎಸ್.ಆರ್. ನಾಗರಾಜ್ ಮತ್ತು ವಲಯ ಸೇನಾನಿ ರೊ. ಆದರ್ಶ್‌ರವರನ್ನು ಸನ್ಮಾನಿಸಲಾಯಿತು. ಕೊನೆಯಲ್ಲಿ ಕ್ಲಬ್‌ನ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಸರ್ವರನ್ನು ವಂದಿಸಿದರು. ಕಾರ್ಯಕ್ರಮದ ನಂತರ ಭರ್ಜರಿ ಭೋಜನ ಏರ್ಪಾಡಾಗಿತ್ತು.

To,

*Book Post*

ಸಂಭ್ರಮದ, ಹಬ್ಬದ ಸಡಗರದ ವಾತಾವರಣವನ್ನು ನಿರ್ಮಿಸಿದ ರೋಟರಿ ಜಿಲ್ಲೆ 3182 ರ ಜಿಲ್ಲಾ ಗವರ್ನರ್ ರೊ.ಎಂಪಿಹೆಚ್‌ಎಫ್. ಸಿ.ಎ. ದೇವ್ ಆನಂದರವರ ಅಧಿಕೃತ ಭೇಟಿಯ ಕಾರ್ಯಕ್ರಮ ದಿನಾಂಕ: 17.03.2025 ರಂದು ನೆಡೆಯಿತು. ಅಂದು ಬೆಳಗ್ಗಿನಿಂದ ನಮ್ಮ ಗವರ್ನರ್‌ರವರು ವಿವಿಧ ಕಾರ್ಯಕ್ರಮಗಳಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ನಮ್ಮೆಲ್ಲಾ ಕ್ಲಬ್‌ನ ಸದಸ್ಯರನ್ನು ಮುಕ್ತವಾಗಿ ಭೇಟಿ ಮಾಡಿ, ಕಲೆತು ಮಾತನಾಡಿ ಎಲ್ಲರಲ್ಲೂ ಒಂದು ವಿಧದ ಸ್ಪೂರ್ತಿ ತುಂಬಿದರು. ಅವುಗಳೆಲ್ಲದರ ವಿವರಗಳು ಈ ಕೆಳಕಂಡಂತಿವೆ. ಅಂದು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸದಸ್ಯರು ತಮ್ಮ ಕುಟುಂಬ ವರ್ಗದವರೊಂದಿಗೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಹಕರಿಸಿದರು. ಈ ಎಲ್ಲಾ ರೋಟರಿ ಬಂಧುಗಳಿಗೂ ಕೃತಜ್ಞತೆಗಳು. ಕಾರ್ಯಕ್ರಮದ ವಿವರ ಈ ರೀತಿ ಇದೆ.

- ಬೆಳಿಗ್ಗೆ 8.30 ಕ್ಕೆ ಸರಿಯಾಗಿ ರೋಟರಿ ಯುವಕೇಂದ್ರಕ್ಕೆ ರೋಟರಿ ಜಿಲ್ಲಾ ಗವರ್ನರ್ ರೊ.ಎಂಪಿಹೆಚ್‌ಎಫ್. ಸಿ.ಎ. ದೇವ್ ಆನಂದರವರು ಮತ್ತು ಶ್ರೀಮತಿ ರೇಖಾದೇವಾನಂದರೊಂದಿಗೆ ಆಗಮಿಸಿದರು – ನಂತರ ಉಪಹಾರ.
- ಬೆಳಿಗ್ಗೆ 8.50 ಕ್ಕೆ ರೊ. ಕೆ. ಸೂರ್ಯನಾರಾಯಣ ಉಡುಪರು ಅಧ್ಯಕ್ಷರು, ರೊ.ಎನ್.ಜಿ. ಉಷಾ ಕಾರ್ಯದರ್ಶಿಗಳು, ಸಹಾಯಕ ಗವರ್ನರ್ ರೊ. ಎಸ್.ಆರ್. ನಾಗರಾಜ್ ಹಾಗೂ ಮುಂದಿನ ಸಾಲಿನ ಅಧ್ಯಕ್ಷರಾದ ರೊ. ಆರ್. ಆನಂದರವರೊಂದಿಗೆ ಮಾತುಕತೆ.




- ಬೆಳಿಗ್ಗೆ 9.20 ಕ್ಕೆ ಕ್ಲಬ್ ಅಸೆಂಬ್ಲಿ ನಡೆಯಿತು. ರೊ. ಸೂರ್ಯನಾರಾಯಣ ಉಡುಪರ ಸ್ವಾಗತದೊಂದಿಗೆ ಮತ್ತು ನೆರೆದಿದ್ದ ಎಲ್ಲಾ ರೋಟರಿ ಸದಸ್ಯರು ತಮ್ಮ ಪರಿಚಯ ಮಾಡಿಕೊಳ್ಳುವುದರೊಂದಿಗೆ ಪ್ರಾರಂಭವಾಯಿತು. ರೋಟರಿ ಜಿಲ್ಲಾ ಗವರ್ನರ್‌ರವರು ಕ್ಲಬ್ ಅಸೆಂಬ್ಲಿ ನೇತೃತ್ವ ವಹಿಸಿಕೊಂಡು ಚೆನ್ನಾಗಿ ನಡೆಸಿಕೊಟ್ಟು, ಕ್ಲಬ್‌ನ ಚಟುವಟಿಕೆಗಳನ್ನು ಗಮನಿಸಿದರು.
- ಬೆಳಿಗ್ಗೆ 10.30 ಕ್ಕೆ ನಮ್ಮ ಕ್ಲಬ್ ನಡೆಸುತ್ತಿರುವ ಜಿಮ್ನಾಷಿಯಂಗೆ ಭೇಟಿ ನೀಡಿದರು.



- ಬೆಳಿಗ್ಗೆ 11.00ಕ್ಕೆ ಕ್ಲಬ್‌ನ ಸದಸ್ಯರಾದ ರೊ.ಉದಯ್ ವಿ. ರಾವ್ ಮತ್ತು ರೊ.ರಕ್ಷಾ ರಾವ್‌ರವರ ಉಷಾ ನರ್ಸಿಂಗ್ ಹೋಂ ನಲ್ಲಿ ಕ್ಲಬ್‌ನ ಗ್ಲೋಬಲ್ ಗ್ರಾಂಟ್ ಅಡಿಯಲ್ಲಿ ಸ್ಥಾಪಿಸಲಾಗಿರುವ ಮೆಮೋಗ್ರಫಿ ಯಂತ್ರವನ್ನು ವೀಕ್ಷಿಸಿದರು.

- ಬೆಳಿಗ್ಗೆ 11.30 ಕ್ಕೆ ನಗರದ ಹೊರ ವಲಯ ದಲ್ಲಿರುವ ನಂಜಪ್ಪ ಲೈಫ್ ಕೇರ್ ಮುಂಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವಲ್ಲಿ – ಕ್ಲಬ್‌ನ ವತಿಯಿಂದ ತಯಾರಿಸಲ್ಪಟ್ಟ ಡಿಸ್ಟ್ರಿಕ್ಟ್ ಪ್ರಾಜೆಕ್ಟ್ ಅನ್ವಯ ರಸ್ತೆ




ಸುರಕ್ಷಾ ಮಾಹಿತಿ ಫಲಕ ಮತ್ತು ಸ್ವಾಗತ ಫಲಕವನ್ನು ರೋಟರಿ ಜಿಲ್ಲೆ 3182 ರ ಗವರ್ನರ್ ರೊ. ಎಂಪಿಹೆಚ್ ಎಫ್. ಸಿ.ಎ. ದೇವ್ ಆನಂದ್‌ರವರು ಅನಾವರಣ ಗೊಳಿಸಿದರು.

- ಮಧ್ಯಾಹ್ನ 12.00 ಕ್ಕೆ ನಮ್ಮ ಕ್ಲಬ್‌ನ ಇನ್ನೊಂದು ನಿರಂತರ ಸೇವಾ ಕಾರ್ಯಕ್ರಮ – ಬುದ್ಧಿ ಮಾಂದ್ಯ ಮಕ್ಕಳ ವಸತಿ ಶಾಲೆ ಆಶಾಕಿರಣಕ್ಕೆ ಭೇಟಿ ನೀಡಿ, ಅಲ್ಲಿನ ಮಕ್ಕಳಿಗೆ



ಡ್ರಾಯಿಂಗ್ ಪುಸ್ತಕಗಳನ್ನು ವಿತರಣೆ ಮಾಡಲಾಯಿತು. ಶಾಲೆಯ ಚೇರ್ಮನ್ ರೊ. ಡಾ. ರಜನಿ ಪೈರವರು ಆಶಾಕಿರಣ ಶಾಲೆ ಹಾಗೂ ಶಿಕ್ಷಕರ ತರಬೇತಿ ಕೇಂದ್ರದ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಶಾಲೆಯ ಗೌರವ ಕಾರ್ಯದರ್ಶಿ ರೊ. ಎ. ಮಂಜುನಾಥ್‌ರವರು ಮತ್ತು ರೋಟರಿ 75ನೇ ದತ್ತಿ ನಿಧಿಯ ಚೇರ್ಮನ್‌ರಾದ ರೊ. ಡಿ.ಎಸ್. ನಟರಾಜ್‌ರವರು ಶಾಲೆ ಟ್ರಸ್ಟ್ ಹಾಗೂ ಇನ್ಸ್ಟ್ಯೂಟ್‌ಗಳ ಕಾರ್ಯಚಟುವಟಿಕೆಗಳ ವಿವರ ನೀಡಿದರು.




**ಶರಣ್ಯ ಆರೈಕೆ ಕೇಂದ್ರಕ್ಕೆ ಕ್ಲಬ್ ವತಿಯಿಂದ ವ್ಹೀಲ್ ಚೇರ್ ಕೊಡುಗೆ**



- ಮಧ್ಯಾಹ್ನ 1.00 ಕ್ಕೆ – ನಗರದ ಹತ್ತಿರವಿರುವ ನಮ್ಮ ಕ್ಲಬ್‌ನಿಂದ ಗ್ಲೋಬಲ್ ಗ್ರಾಂಟ್ ಮೂಲಕ ಹಲವಾರು ಪರಿಕರಗಳನ್ನು ಕೊಡಮಾಡಲ್ಪಟ್ಟಿರುವ ಉಲ್ಬಣಿಸಿದ ರೋಗಿಗಳ ಆರೈಕೆ ಕೇಂದ್ರ "ಶರಣ್ಯ" ಕ್ಕೆ ಭೇಟಿ ನೀಡಿ ಅಲ್ಲಿನ ಪರಿಸರ ಹಾಗೂ ಅದರ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿದರು. ಅದರ ಮುಖ್ಯಸ್ಥರಾದ ರೊ. ಡಿ.ಎಲ್. ಮಂಜುನಾಥ್ ಮತ್ತು ರೊ. ಟಿ.ಆರ್. ಅಶ್ವಥನಾರಾಯಣ್ ಮುಂತಾದವರು ಉಪಸ್ಥಿತರಿದ್ದು ಶರಣ್ಯದ ಕಾರ್ಯಗಳನ್ನು ವೀಡಿಯೋ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ನಮ್ಮ ಕ್ಲಬ್‌ನ ವತಿಯಿಂದ ಶರಣ್ಯ ಕೇಂದ್ರಕ್ಕೆ ವ್ಹೀಲ್ ಚೇರ್‌ವೊಂದನ್ನು ಕೊಡುಗೆಯಾಗಿ ನೀಡಲಾಯಿತು. ನಂತರ ಅಲ್ಲಿಯೇ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಲಾಗಿತ್ತು.



ಮೇಲಿನ ಹನಸವಾಡಿ ಸರ್ಕಾರಿ ಶಾಲೆಗೆ 3 ಬುಕ್ ರ್‍ಯಾಕ್ ಕೊಡುಗೆ



ಗೌತಮಪುರ ಗ್ಲೋಬಲ್ ಗ್ರಾಂಟ್ ಪ್ರಾಜೆಕ್ಟ್‌ಗೆ
ಶ್ರೀಯುತ ನವನೀತ್‌ರವರಿಂದ 17,000 ಡಾಲರ್ ದೇಣಿಗೆ









ಮನಸ್ಫೂರ್ತಿ ಕಲಿಕಾ ಕೇಂದ್ರಕ್ಕೆ ನಮ್ಮ ಕ್ಲಬ್ ವತಿಯಿಂದ 2 ಹೊಲಿಗೆ ಯಂತ್ರದ ಕೊಡುಗೆ




Salute the Silent Workers



Donating Rs. 10,000 to Biodiversity Forest

## ಮಹಿಳಾ ನಾಟಕೋತ್ಸವ – ಕಲಾ ಸಿಂಚನ

ನಾಟಕ ಸ್ಪರ್ಧೆ, ಹಾಸ್ಯ, ಸ್ವಾರಸ್ಯ, ನಗೆ ಹಬ್ಬ ವಿಶೇಷ ಕಾರ್ಯಕ್ರಮ.
ಪ್ರೇಕ್ಷಕರಿಗೂ ಸ್ಪರ್ಧೆ ಬಹುಮಾನ.
ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ
ದಿನಾಂಕ: 28–03–2025, ಶುಕ್ರವಾರ ಅಂಬೇಡ್ಕರ್ ಭವನದಲ್ಲಿ
ಸಂಜೆ 4 ಗಂಟೆಗೆ ನಡೆಯುವ ಈ ಕಾರ್ಯಕ್ರಮಕ್ಕೆ
ಎಲ್ಲರೂ ಬನ್ನಿ, ನಿಮ್ಮ ಸ್ನೇಹಿತರನ್ನು ಕರೆತನ್ನಿ.



*Happy Birthday Wishes*



*Raghuram Bhatt H. S.*
*23rd March*



*Srikanth Nadig*
*25th March*



## ಈ ವಾರ

ದಿನಾಂಕ: 26–03–2025, ಬುಧವಾರ ಸಂಜೆ 6:45 ರಿಂದ

**ರೋಟರಿ ಸದಸ್ಯರಿಗೆ ಸ್ಪರ್ಧೆ - (FUN GAMES)**

(ಏಪ್ರಿಲ್‌ನಲ್ಲಿ ಏರ್ಪಡಿಸುವ ಚಾರ್ಟರ್ ಡೇ
ಪ್ರಯುಕ್ತ ಈ ವಾರ ರೋಟರಿ ಸದಸ್ಯರಿಗೆ ಸ್ಪರ್ಧೆ ಇರುತ್ತದೆ)

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ

## ಚಿಂತನ

**ಅಜ್ಞಾನ ಇರುವ ಕಡೆ ಜ್ಞಾನ ಬೆಳಗಿಸಿ**
**ಸಂಘರ್ಷ ಇರುವ ಕಡೆ ಸಾಮರಸ್ಯ ಮೂಡಿಸಿ**
**ಕೊರತೆ ಇರುವ ಕಡೆ ಸಮೃದ್ಧಿ ತುಂಬಲು ಪ್ರಯತ್ನಿಸಿ**

– ರೊ. ಕೆ. ಸೂರ್ಯನಾರಾಯಣ ಉಡುಪ